**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 107/2016**

ಸಿಡಬ್ಲ್ಯು 13 ಪಿಡಬ್ಲ್ಯು- 14

ದಿನಾಂಕಃ 16.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪೂರ್ಣ ಹೆಸರು : ಅಪ್ಪಣ್ಣಾ ಬಸವಂತ ಕೋಸ್ಥಿ
ವಯಸ್ಸು : 34 ವರ್ಷ
ಉದ್ಯೋಗ : ಶೇತ್ಕಿ
ವಾಸ ಸ್ಥಳ : ಕಮತೇನಟ್ಟಿ

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನನಗೆ ಚಾಸಾ 1, 7 ರಿಂದ 12 ರವರ ಪರಿಚಯ ಇದೆ. ಆರೋಪಿತರು ಗೊತ್ತು. ಮೃತ ಬಾಳಕೃಷ್ಣನಿಗೆ ನೋಡಿದ್ದೇನೆ. ಆರೋಪಿತರು ಚಾಸಾ 7 ರಿಂದ 12 ಮತ್ತು ಮೃತ ಬಾಳಕೃಷ್ಣನಿಗೆ ಹೊಡೆಬಡೆ ಮಾಡಿದ್ದು ನೋಡಿಲ್ಲ ಮತ್ತು ಗೊತ್ತಿಲ್ಲ. 14-15 ವರ್ಷದ ಹಿಂದೆ ಮೃತ ಬಾಳಕೃಷ್ಣ ಬಡೆದಾಟದಲ್ಲಿ ಸತ್ತಿದ್ದಾನೆ. ಆರೋಪಿತರು ನನಗೆ ಹೊಡೆಬಡೆ ಮಾಡಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೇಳಿಕೊಂಡಿದ್ದು, ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಮೃತ ಬಾಳಕೃಷ್ಣ ಮತ್ತು ಆರೋಪಿತರ ಮನೆಗಳು ಅಕ್ಕಪಕ್ಕ ಇವೆ ಅನ್ನುವದು ನಿಜ. 30.12.2014 ರಂದು ಸಂಜೆ 06.30 ಗಂಟೆಗೆ ಚಾಸಾ 1 ಇತನು ಮೃತ ಬಾಳಕೃಷ್ಣ ಇವರ ಮನೆ ಹಿಂದೆ ಇರುವ ಆಲಸ ಕಳ್ಳಿಯಲ್ಲಿ ಜೇನುಗೂಡು ಬಿಡಿಸಲು ಹೋದಾಗ ಅಲ್ಲಿ ಚಾಸಾ 2 ಮೂತ್ರ ವಿಸರ್ಜನೆಗೆ ಕುಳಿತಿರುವುದನ್ನು ನೋಡಿದ್ದರಿಂದ 2 ಮತ್ತು 5 ನೇ ಆರೋಪಿತರು ಆತನ ಜೊತೆ ಆ ಬಗ್ಗೆ ಜಗಳ ಮಾಡಿದ್ದರು ಅನ್ನುವುದು ಗೊತ್ತಿಲ್ಲ. 31.12.2014 ರಂದು 2 ಮತ್ತು 5 ನೇ ಆರೋಪಿತರು ಮೃತ ಬಾಳಕೃಷ್ಣ ಇವರ ಮನೆ ಹಿಂದೆ ಹಾಯ್ದು ಹೋಗುತ್ತಿದ್ದಾಗ ಮೃತ ಬಾಳಕೃಷ್ಣನು ನಿನ್ನೆ ಎಕೆ ಚಾಸಾ 1 ರ ಜೊತೆ ಜಗಳ ಮಾಡಿದಿರಿ ಎಂದು ಅವರಿಗೆ ಕೇಳಿದಾಗ ಮಕ್ಕಳಿಯರ್ಾ ನಮಗೇನು ಕೇಳುತ್ತಿರಿ ಶ್ವೇತಾ ಮೂತ್ರವಿಸರ್ಜನೆಗೆ ಕುಳಿತಾ ನೋಡಿದ್ದಾನೆ ನಿನ್ನೆ ಉಳಕೊಂಡ ಇವತ್ತು ನಿಮಗೆ ಖಲಾಸ ಮಾಡುತ್ತೇವೆಂದು 1 ನೇ ಆರೋಪಿ ಬಡಗೆಯಿಂದ ಚಾಸಾ 10 ರ ಮುಖಕ್ಕೆ ಮತ್ತು ತಲೆಗೆ ಹೊಡೆದ, 2 ಮತ್ತು 5 ನೇ ಆರೋಪಿತರು ಚಾಸಾ 11 ರ ಕೈಕಾುಗಳಿಗೆ ಹೊಡೆದರು. 4 ನೇ ಆರೋಪಿ ಬಡಿಗೆಯಿಂದ ನನ್ನ ಬಲಬುಜಕ್ಕೆ ಹೊಡೆದ ಅನ್ನುವುದು ಸರಿಯಲ್ಲ. 3 ಮತ್ತು 6 ನೇ ಆರೋಪಿತರು ಬಡಿಗೆಯಿಂದ ಚಾಸಾ 7, 8, 10 ಮತ್ತು ಮೃತ ಬಾಳಕೃಷ್ಣನ ತಲೆಗೆ ಹೊಡೆದರು ಅನ್ನುವುದು ಸರಿಯಲ್ಲ.

9 ನೇ ಆರೋಪಿ ನನಗೆ ಬಡಿಗೆಯಿಂದ ನನ್ನ ಎರಡೂ ಕೈಗಳಿಗೆ ಹೊಡೆದ ಅನ್ನುವುದು ಸರಿಯಲ್ಲ. 7 ಮತ್ತ 8 ನೇ ಆರೋಪಿ ಚಾಸಾ 12 ರ ಕೈಕಾಲುಗಳಿಗೆ ಹೊಡೆದರು ಅನ್ನುವುದು ಸರಿಯಲ್ಲ. 8 ನೇ ಆರೋಪಿ ಚಾಸಾ 1 ರಿಗೆ ಒದ್ದು ಕೆಳಗೆ ಕೆಡವಿದ ಅನ್ನುವುದು ಸರಿಯಲ್ಲ. ನನಗೆ ಹೊಡೆದಿದ್ದ ಗಾಯದಿಂದ ನಾನು ಆಸ್ಪತ್ರೆಯಲ್ಲಿ ಅಡಮಿಟ ಆಗಿದ್ದೆ ಅನ್ನುವುದು ಸರಿಯಲ್ಲ. 31.12.2014 ರಂದು ನಾನು ಬೆಳಗಾವಿ ಲೆಕ ವಿವ್ ಆಸ್ಪತ್ರೆಯಲ್ಲಿ ಅಡಮಿಟ ಆಗಿದ್ದೆ ಅನ್ನುವದಕ್ಕೆ ಸಾಕ್ಷಿ ನಾನು ಹೊಲದಲ್ಲಿ ಹತ್ತಿ ಚೀಲ ಎತ್ತುವಾಗ ಗಾಯವಾಗಿದ್ದರಿಂದ ಅಡಮಿಟ ಆಗಿದ್ದೆ ಎಂದು ಹೇಳುತ್ತಾರೆ. 01.01.2015 ರಂದು ಘಟನೆ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ಹೇಳಿಕೆಯನ್ನು ನಿಪಿ 22 ಎಂದು ಗುರುತಿಸಲಾಯಿತು. ಈಗ ರಾಜಿ ಮಾಡಿಕೊಂಡಿದ್ದರಿಂದ ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ಮೃತ ಬಾಳಕೃಷ್ಣ ಸದರಿ ಆಸ್ಪತ್ರೆಯಲ್ಲಿ ಆರೋಪಿತರು ಹೊಡೆದಿದ್ದ ಗಾಯದಿಂದ 10.01.2015 ರಂದ ತೀರಿಕೊಂಡರು ಎಂದು 11.01.2015 ರಂದು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 23 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು:</u>-** ಆರೋಪಿ ಪರ ಶ್ರೀ ಎಸ ಎನ ಪಿ ವಕೀಲರು ಇಲ್ಲ ಎಂದು ಹೇಳುತ್ತಾರೆ.

**<u>ಮರು ಮುಖ್ಯ ವಿಚಾರಣೆ</u>** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.